ಪತ್ರಿಕಾ ಪ್ರಕಟಣೆ

# ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಿಂದ ಮುಂಬರುವ ಹಬ್ಬಗಳಿಗಾಗಿ ಸಾಮಾನ್ಯ ವ್ಯಾಪಾರ, ಗೃಹ ವಿಭಾಗ ಹಾಗೂ ಫ್ಯಾಷನ್ ವಹಿವಾಟು ವಿಸ್ತರಣೆ

- **24 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಉದ್ದಗಲಕ್ಕೂ 1,350ಕ್ಕೂ ನಗರಗಳು ಮತ್ತು 8,000 ಪಿನ್‌ಕೋಡ್‌ಗಳಲ್ಲಿನ ರಿಟೇಲರ್ ಮತ್ತು ಕಿರಾಣಿ ಅಂಗಡಿಗಳಿಗೆ ವಹಿವಾಟು ವಿಸ್ತರಿಸಲು ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಿಂದ ಗುರಿ ನಿಗದಿ**
- **ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಲ್ಲಿ ಸಾಮಾನ್ಯ ವ್ಯಾಪಾರ ವಿಭಾಗದಲ್ಲಿ 24,000 ಉತ್ಪನ್ನಗಳ ಲಭ್ಯತೆ**
- **1,100ಕ್ಕೂ ಹೆಚ್ಚು ಹೊಸ ನಗರಗಳು ಮತ್ತು 7,000ಕ್ಕಿಂತ ಹೆಚ್ಚಿನ ಪಿನ್‌ಕೋಡ್‌ಗಳಿಗೆ ಫ್ಯಾಷನ್ ಕೊಡುಗೆಗಳ ವಿಸ್ತರಣೆ**

**ಬೆಂಗಳೂರು, ಸೆಪ್ಟೆಂಬರ್ 23, 2021:** ಭಾರತದ ಸ್ವದೇಶಿ ಕಂಪನಿ ಫ್ಲಿಪ್‌ಕಾರ್ಟ್ ಗ್ರೂಪ್‌ನ ಡಿಜಿಟಲ್ ಬಿ2ಬಿ ವಿಭಾಗವಾಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಸಾಮಾನ್ಯ ಸರಕುಗಳ ವಿಭಾಗವನ್ನು ಪ್ರಾರಂಭಿಸುವುದಾಗಿ ಇಂದು ಇಲ್ಲಿ ಘೋಷಿಸಿತು. ಜನರಲ್ ಮರ್ಚಂಡೈಸ್ (General Merchandise) ಉತ್ಪನ್ನಗಳನ್ನು ತನ್ನ ಆ್ಯಪ್‌ಗೆ ಸೇರಿಸುವುದರೊಂದಿಗೆ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತಂತ್ರಜ್ಞಾನವನ್ನು ಬಳಸಿಕೊಂಡು ಎಂಎಸ್‌ಎಂಇ ಸೇರಿದಂತೆ ಸ್ಥಳೀಯ ಭಾರತೀಯ ತಯಾರಕರನ್ನು ರಿಟೇಲ್ ವ್ಯಾಪಾರಿಗಳೊಂದಿಗೆ ನೇರವಾಗಿ ಸಂಪರ್ಕಿಸಲು ತನ್ನ ಪ್ರಯತ್ನಗಳನ್ನು ಬಲಪಡಿಸಿದೆ. ಇದರಿಂದಾಗಿ ಹೆಚ್ಚಿನ ಉತ್ಪನ್ನಗಳು ಈಗ ಕಿರಾಣಿ ಅಂಗಡಿಗಳು ಮತ್ತು ಸಣ್ಣ ಚಿಲ್ಲರೆ ವ್ಯಾಪಾರಿಗಳಿಗೆ ಸಗಟು ಮಾರುಕಟ್ಟೆ ತಾಣದಲ್ಲಿ ಸುಲಭವಾಗಿ ಲಭ್ಯ ಇರಲಿವೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಜನರಲ್ ಮರ್ಚಂಟೈಲ್ ವಹಿವಾಟಿನೊಂದಿಗೆ ಗೃಹ ಬಳಕೆಯ ವಸ್ತ್ರಗಳು, ಅಡುಗೆ ಮನೆ ಪರಿಕರ, ಸಂಗ್ರಹ ಪರಿಕರ, ಗೃಹೋಪಯೋಗಿ ಸಲಕರಣೆಗಳು, ಆಟಿಕೆಗಳು, ಲಗೇಜ್, ಸ್ಪೋರ್ಟ್ಸ್ ಮತ್ತು ಫಿಟ್ನೆಸ್ ವಿಭಾಗಗಳಲ್ಲಿ 24,000 ಉತ್ಪನ್ನಗಳನ್ನು ಒಳಗೊಂಡ ವಹಿವಾಟಿಗೆ ಚಾಲನೆ ನೀಡಿದೆ. ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸ್‌ಗಡ, ದಿಯು ಮತ್ತು ದಮನ್, ಗೋವಾ, ಗುಜರಾತ್, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ಪುದುಚೇರಿ, ರಾಜಸ್ಥಾನ. ಸಿಕ್ಕಿಂ, ತಮಿಳುನಾಡು, ತೆಲಂಗಾಣ, ತ್ರಿಪುರ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ವಹಿವಾಟು ಲಭ್ಯವಿರುತ್ತದೆ.

ಈ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ 8,000 ಪಿನ್‌ಕೋಡ್‌ಗಳಾದ್ಯಂತ 1,350ಕ್ಕೂ ಹೆಚ್ಚು ನಗರಗಳಲ್ಲಿನ ಗ್ರಾಹಕರಿಗೆ ಈ ವಹಿವಾಟು ಲಭ್ಯ ಇರಲಿದೆ. ಈ ಉತ್ಪನ್ನಗಳನ್ನು ಅಹಮದಾಬಾದ್, ದೆಹಲಿ, ಜೈಪುರ, ಜಲಂಧರ್, ಲುಧಿಯಾನ, ಮೀರತ್, ಪಾಣಿಪತ್, ರಾಜ್‌ಕೋಟ್, ಸೂರತ್ ಮತ್ತು ತಿರುಪ್ಪೂರ್‌ನಲ್ಲಿನ ಅತ್ಯುತ್ತಮ ತಯಾರಕರಿಂದ ಖರೀದಿಸಲಾಗಿರುತ್ತದೆ. ಮುಂದಿನ 6 ತಿಂಗಳಲ್ಲಿ ಈ ವಿಭಾಗವು 55,000 ಹೊಸ ಉತ್ಪನ್ನಗಳ ಸೇರ್ಪಡೆ (ಲಿಸ್ಟಿಂಗ್ಸ್) ಮತ್ತು 1,000 ಮಾರಾಟಗಾರರನ್ನು ಸೇರಿಸುವ ಮೂಲಕ ಪೂರೈಕೆದಾರರ ಸೌಲಭ್ಯವನ್ನು ಬಲಪಡಿಸುವ ಗುರಿ ಹೊಂದಿದೆ.

**ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಆದರ್ಶ್ ಮೆನನ್** ಅವರು ಮಾತನಾಡಿ, ‘ರಿಟೇಲ್ ವ್ಯಾಪಾರಿಗಳು, ಸಣ್ಣ ಉದ್ಯಮಗಳು, ಮತ್ತು ಕಿರಾಣಿ ಮಾಲೀಕರ ವ್ಯವಹಾರ ಹೆಚ್ಚಿಸುವ ನಮ್ಮ ನಿರಂತರ ಬದ್ಧತೆಯನ್ನು ನಮ್ಮ ಈ ಹೊಸ ವಹಿವಾಟು ವಿಸ್ತರಣಾ ಯೋಜನೆಯು ಸಾಬೀತುಪಡಿಸುತ್ತದೆ. ತಂತ್ರಜ್ಞಾನದಲ್ಲಿನ ನಮ್ಮ ಬಲವಾದ ಸಾಮರ್ಥ್ಯಗಳನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ, ನಾವು ಸಣ್ಣ ಉದ್ಯಮಗಳಿಗೆ ಕಡಿಮೆ ಮೌಲ್ಯದಲ್ಲಿ ವ್ಯಾಪಕವಾದ ಉತ್ಪನ್ನಗಳ ಲಭ್ಯತೆಯನ್ನು ಒದಗಿಸುತ್ತೇವೆ. ನಾವು ವೈವಿಧ್ಯಮಯ ಉತ್ಪನ್ನಗಳನ್ನು ಸೇರ್ಪಡೆ ಮಾಡುವ ಮತ್ತು ಮಹತ್ವದ ಮೂಲಸೌಕರ್ಯಗಳನ್ನು ಸೇರಿಸುವ ಮೂಲಕ ಮತ್ತು ಕಾರ್ಯಾಚರಣೆಗಳನ್ನು ಬಲಪಡಿಸುವ ಮೂಲಕ ನಮ್ಮ ಮೌಲ್ಯ ಪ್ರತಿಪಾದನೆಯನ್ನು ಬಲಪಡಿಸಲು ಹಣ ಹೂಡಿಕೆ

ಮಾಡುತ್ತಿದ್ದೇವೆ. ತಂತ್ರಜ್ಞಾನದ ಸಹಾಯ ಮತ್ತು ಸರಿಯಾದ ಹೂಡಿಕೆಯೊಂದಿಗೆ, ನಾವು ಸಣ್ಣ ವ್ಯಾಪಾರಿಗಳು ಮತ್ತು ಕಿರಾಣಿ ಅಂಗಡಿ ಮಾಲೀಕರಿಗೆ ಅವರ ಜೀವನವನ್ನು ಸುಲಭಗೊಳಿಸುವ ಮತ್ತು ವ್ಯಾಪಾರವನ್ನು ಹೆಚ್ಚು ಲಾಭದಾಯಕವಾಗಿಸುವುದನ್ನು ಮುಂದುವರಿಸುತ್ತೇವೆ' ಎಂದು ಹೇಳಿದ್ದಾರೆ.

ಜನರಲ್ ಮರ್ಚಂಡೈಸ್ ಮಾರುಕಟ್ಟೆಯು ಸದ್ಯಕ್ಕೆ ಜಡಗೊಂಡ ಸ್ಥಿತಿಯಲ್ಲಿ ಇದೆ. ರಿಟೇಲ್ ವ್ಯಾಪಾರಿಗಳು ಉತ್ತಮ ಗುಣಮಟ್ಟದ ಬ್ರ್ಯಾಂಡ್‌ಗಳು ಮತ್ತು ಉತ್ಪನ್ನಗಳ ಖರೀದಿಗೆ ಬಹಳ ಸೀಮಿತ ಸೌಲಭ್ಯ ಹೊಂದಿದ್ದಾರೆ. ಇದರ ಪರಿಣಾಮವಾಗಿ ಸೀಮಿತ ಪ್ರಮಾಣದಲ್ಲಿ ವಹಿವಾಟು ನಡೆಸುತ್ತಿದ್ದಾರೆ. ಕೇಂದ್ರೀಕೃತ ಪೂರೈಕೆದಾರ ವ್ಯವಸ್ಥೆಯು ದೇಶದಾದ್ಯಂತ ಖರೀದಿದಾರರಿಗೆ ತಯಾರಕರ ಲಭ್ಯತೆಯನ್ನು ಸೀಮಿತಗೊಳಿಸುತ್ತದೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಈ ವಿಭಾಗವನ್ನು ಆರಂಭಿಸುವ ಮೂಲಕ ತಯಾರಕರನ್ನು ಸಂಪರ್ಕಿಸುವ ಸೌಲಭ್ಯವನ್ನು ಹೆಚ್ಚಿಸುವ ಮೂಲಕ ಮತ್ತು ಗ್ರಾಹಕರಿಗೆ ಉತ್ತಮ ಗುಣಮಟ್ಟದ ಆಯ್ಕೆ ಸೌಲಭ್ಯ ಮತ್ತು ಅನುಕೂಲತೆಯನ್ನು ಒದಗಿಸಿಕೊಡುವ ಗುರಿಯನ್ನು ಹೊಂದಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ತನ್ನ ಫ್ಯಾಷನ್ ವಿಭಾಗವನ್ನು ದೇಶದಾದ್ಯಂತ ಇರುವ ಗ್ರಾಹಕರಿಗೆ ವಿಸ್ತರಿಸಿದೆ. ಹಬ್ಬದ ಋತುವಿನಲ್ಲಿ ಮಾರಾಟ ಮತ್ತು ವಹಿವಾಟು ಹೆಚ್ಚಿಸಲು ಈಗ 1,100ಕ್ಕೂ ಹೊಸ ನಗರಗಳಲ್ಲಿ ಮತ್ತು 7,000 ಕ್ಕೂ ಹೆಚ್ಚು ಪಿನ್‌ಕೋಡ್‌ಗಳಲ್ಲಿ ಈ ಉತ್ಪನ್ನಗಳು ಈಗ ಲಭ್ಯ ಇರಲಿವೆ. ಈ ನಗರಗಳಲ್ಲಿನ ಫ್ಯಾಷನ್ ರಿಟೇಲ್‌ರುಗಳು ಈಗ ಫ್ಲಿಪ್‌ಕಾರ್ಟ್‌ನ ಪ್ರಯೋಜನವನ್ನು ಪಡೆಯಬಹುದು. ಉಡುಪು ಮತ್ತು ಪಾದರಕ್ಷೆಗಳ ಮೇಲೆ ಉತ್ತಮ ಲಾಭದ ಪ್ರಯೋಜನ ಪಡೆದುಕೊಳ್ಳಬಹುದು. ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ವಹಿವಾಟಿನಲ್ಲಿ ಇ-ಕಾಮರ್ಸ್ ಮೂಲಕ ಫ್ಯಾಷನ್ ವಿಭಾಗವು ಗಮನಾರ್ಹ ಬೆಳವಣಿಗೆಯನ್ನು ಕಂಡಿದೆ. 29,000 ಕ್ಕೂ ಹೆಚ್ಚು ಫ್ಯಾಷನ್ ರಿಟೇಲ್ ವ್ಯಾಪಾರಿಗಳಿಗೆ 950 ಮಾರಾಟಗಾರರು ಸರಕುಗಳನ್ನು ಪೂರೈಸುತ್ತಿದ್ದಾರೆ. ಈ ಮಾರಾಟಗಾರರಲ್ಲಿ ಬಹುತೇಕರು ದೇಶದಲ್ಲಿನ ದೊಡ್ಡ ಫ್ಯಾಷನ್ ಕೇಂದ್ರಗಳಲ್ಲಿ ವಾಸಿಸುತ್ತಾರೆ. ಮುಂಬರುವ ತಿಂಗಳುಗಳಲ್ಲಿ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಈ ಮಾರಾಟಗಾರರ ಸಂಖ್ಯೆಯನ್ನು 2,000ದ ಗಡಿ ದಾಟಿಸಲು ಉದ್ದೇಶಿಸಿದೆ. ಆಗ್ರಾ, ಅಹಮದಾಬಾದ್, ಬೆಂಗಳೂರು, ದೆಹಲಿ, ಹೈದರಾಬಾದ್, ಇಂದೋರ್, ಜೈಪುರ, ಜಲಂಧರ್, ಕಾಂಚೀಪುರಂ, ಕಾನ್ಪುರ, ಕೋಲ್ಕತಾ, ಲುಧಿಯಾನ, ಲಕ್ನೋ ನಗರಗಳಲ್ಲಿನ ಪ್ರಮುಖ ವಸ್ತ್ರೋದ್ಯಮ ಮತ್ತು ಪಾದರಕ್ಷೆ ಕೇಂದ್ರಗಳಲ್ಲಿನ ತಯಾರಕರನ್ನು ಈ ವಹಿವಾಟಿಗೆ ಸೇರ್ಪಡೆ ಮಾಡಲು ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಉದ್ದೇಶಿಸಿದೆ.

2020ರಲ್ಲಿ ಆರಂಭವಾದ ಫ್ಲಿಪ್‌ಕಾರ್ಟ್ ಹೋಲ್‌ಸೇಲ್- ಬೆಂಗಳೂರು, ಬಿಹಾರ, ದೆಹಲಿ, ಗುರುಗ್ರಾಂ ಮತ್ತು ಮುಂಬೈನಲ್ಲಿನ ಫ್ಯಾಷನ್ ವಿಭಾಗದ ತಯಾರಕರ ಮೂಲಕ ರಿಟೇಲ್ ವ್ಯಾಪಾರಿಗಳಿಗೆ ಮತ್ತು ಸಣ್ಣ ಉದ್ಯಮಗಳಿಗೆ ಲಭ್ಯವಿತ್ತು. ಈಗ ಹೊಸ ಪ್ರದೇಶ ಮತ್ತು ನಗರಗಳಿಗೆ ತನ್ನ ವಹಿವಾಟಿನ ವ್ಯಾಪ್ತಿಯನ್ನು ಸ್ಥಿರವಾಗಿ ವಿಸ್ತರಿಸುತ್ತಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ರಿಟೇಲ್ ಮಾರುಕಟ್ಟೆ ವ್ಯವಸ್ಥೆಗೆ ಲಭ್ಯ ಇರುವ ಏಕೈಕ ಸೌಲಭ್ಯವಾಗಿದೆ. ಇದು ಉತ್ತಮ ಬೆಲೆಗೆ ಉತ್ಪನ್ನಗಳ ವ್ಯಾಪಕ ಆಯ್ಕೆಯ ಸೌಲಭ್ಯವನ್ನು ನೀಡುತ್ತದೆ. ತಂತ್ರಜ್ಞಾನ ಬಳಕೆಗೆ ಆದ್ಯತೆ ನೀಡುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಧೋರಣೆಯು ವಹಿವಾಟುದಾರರಿಗೆ ಗಮನಾರ್ಹ ಪ್ರಯೋಜನಗಳನ್ನು ಒದಗಿಸುತ್ತದೆ. ಜೊತೆಗೆ ವಹಿವಾಟು ವಿಸ್ತರಿಸುವುದಕ್ಕೂ ನೆರವಾಗುತ್ತಿದೆ. ಪ್ರಾರಂಭಗೊಂಡ ಅಲ್ಪಾವಧಿಯಲ್ಲಿ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ವಹಿವಾಟು ದೇಶದ ಸಣ್ಣ ಪಟ್ಟಣಗಳನ್ನು ಒಳಗೊಂಡಂತೆ ಕಿರಾಣಿ ಅಂಗಡಿಗಳು ಮತ್ತು ಎಂಎಸ್‌ಎಂಇಗಳಿಗೆ ತ್ವರಿತಗತಿಯಲ್ಲಿ ತನ್ನ ಸೇವೆ ವಿಸ್ತರಿಸಿತು. ಫ್ಯಾಷನ್, ದಿನಸಿ ಮತ್ತು ಈಗ ದಿನಬಳಕೆಯ ಸಾಮಾನ್ಯ ಸರಕುಗಳನ್ನು ಈ ಸೌಲಭ್ಯದಡಿ ಒದಗಿಸಲಾಗುತ್ತಿದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಫ್ಲಿಪ್‌ಕಾರ್ಟ್ ಗ್ರೂಪ್‌ನ ಅನುಭವ, ಉದ್ಯಮದ ತಿಳಿವಳಿಕೆ ಮತ್ತು ಡಿಜಿಟಲ್ ಕ್ಷೇತ್ರದಲ್ಲಿ ಕಿರಾಣಿ ವರ್ತಕರು ಮತ್ತು ರಿಟೇಲ್ ವ್ಯಾಪಾರಿಗಳಿಗೆ ಉತ್ತಮ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಹೊಂದಿದೆ. ಇವರೆಲ್ಲರೂ ಈಗ ಇ-ಕಾಮರ್ಸ್ ಅನ್ನು ತಮ್ಮ ಆದ್ಯತೆಯ ಖರೀದಿಯ ವಿಧಾನವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ದೇಶದಾದ್ಯಂತ 15 ಲಕ್ಷಕ್ಕಿಂತಲೂ ಹೆಚ್ಚು ಸದಸ್ಯರಿಗೆ ಸೇವೆ ಸಲ್ಲಿಸುತ್ತಿದೆ. ಇದರಲ್ಲಿ ಕಿರಾಣಿ ಅಂಗಡಿಗಳು, ಹೋರೆಕಾ (ಹೋಟೆಲ್, ರೆಸ್ಟೋರೆಂಟ್ ಮತ್ತು ಕೆಫೆಟೇರಿಯಾ) ಮತ್ತು ಒ & ಐ (ಕಚೇರಿಗಳು ಮತ್ತು ಸಂಸ್ಥೆಗಳು) ಸೇರಿವೆ.

**ಫ್ಲಿಪ್‌ಕಾರ್ಟ್ ಗ್ರೂಪ್ ಬಗ್ಗೆ**

ಫ್ಲಿಪ್‌ಕಾರ್ಟ್ ಗ್ರೂಪ್, ಭಾರತದ ಪ್ರಮುಖ ಡಿಜಿಟಲ್ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ. ಫ್ಲಿಪ್‌ಕಾರ್ಟ್, ಮಿಂತ್ರಾ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮತ್ತು ಕ್ಲಿಯರ್‌ಟ್ರಿಪ್ ಕಂಪನಿಗಳನ್ನು ಈ ಸಮೂಹವು ಒಳಗೊಂಡಿದೆ. ಈ ಸಮೂಹವು ಭಾರತದ ಪ್ರಮುಖ ಪಾವತಿ ಆ್ಯಪ್‌ಗಳಲ್ಲಿ ಒಂದಾಗಿರುವ ಫೋನ್‌ಪೇದ ಬಹುಪಾಲು ಷೇರುಗಳನ್ನು ಹೊಂದಿದೆ.

2007ರಲ್ಲಿ ಆರಂಭವಾಗಿರುವ ಫ್ಲಿಪ್‌ಕಾರ್ಟ್, ಲಕ್ಷಾಂತರ ಗ್ರಾಹಕರು, ಮಾರಾಟಗಾರರು, ವ್ಯಾಪಾರಿಗಳು ಮತ್ತು ಸಣ್ಣ ಉದ್ಯಮಗಳು ಭಾರತದ ಡಿಜಿಟಲ್ ವಾಣಿಜ್ಯ ಕ್ರಾಂತಿಯ ಭಾಗವಾಗಲು ಅನುವು ಮಾಡಿಕೊಟ್ಟಿದೆ. ನೋಂದಾಯಿತ ಗ್ರಾಹಕರ ಸಂಖ್ಯೆ 35 ಕೋಟಿಗಿಂತಲೂ ಹೆಚ್ಚಾಗಿದೆ. 80ಕ್ಕೂ ವಿಭಾಗಗಳಲ್ಲಿ 15 ಕೋಟಿ ಉತ್ಪನ್ನಗಳನ್ನು ನೀಡುತ್ತಿದೆ. ಭಾರತದಲ್ಲಿ ವಾಣಿಜ್ಯ ವಹಿವಾಟು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ಮಾಡಲು, ಎಲ್ಲರಿಗೂ ಅದು ಕೈಗೆಟುಕುವಂತೆ ಮಾಡಲು, ಗ್ರಾಹಕರನ್ನು ಸಂತೋಷಪಡಿಸಲು, ವಹಿವಾಟಿನ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಉದ್ಯಮಿಗಳು ಮತ್ತು ಎಂಎಸ್‌ಎಂಇಗಳ ತಲೆಮಾರುಗಳನ್ನು ಸಬಲೀಕರಣಗೊಳಿಸುವ ನಮ್ಮ ಪ್ರಯತ್ನಗಳು ಫಲ ನೀಡಿವೆ. ಉದ್ಯಮಗಳಲ್ಲಿ ಅನೇಕ ಹೊಸತನಗಳನ್ನು ಮೊದಲ ಬಾರಿಗೆ ಪರಿಚಯಿಸುವುದಕ್ಕೂ ಇವೆಲ್ಲವು ನಮಗೆ ಪ್ರೇರಣೆ ನೀಡಿವೆ. ಸರಕು ಪೂರೈಸಿದ ನಂತರವೇ ನಗದು ಪಾವತಿ (ಕ್ಯಾಷ್ ಆನ್ ಡೆಲಿವರಿ), ಬಡ್ಡಿರಹಿತ ಸಮಾನ ಮಾಸಿಕ ಕಂತು ಪಾವತಿ ಸೌಲಭ್ಯ (ನೋ ಕಾಸ್ಟ್ ಇಎಂಐ) ಮತ್ತು ಸುಲಭ ರಿಟರ್ನ್ಸ್ ಸೌಲಭ್ಯಗಳನ್ನು ಮೊದಲ ಬಾರಿಗೆ ಪರಿಚಯಿಸಿರುವುದಕ್ಕೆ ಫ್ಲಿಪ್‌ಕಾರ್ಟ್ ಹೆಸರುವಾಸಿಯಾಗಿದೆ. ಗ್ರಾಹಕ ಕೇಂದ್ರಿತ ಆವಿಷ್ಕಾರಗಳು ಲಕ್ಷಾಂತರ ಭಾರತೀಯರಿಗೆ ಆನ್‌ಲೈನ್ ಶಾಪಿಂಗ್ ಅನ್ನು ಹೆಚ್ಚು ಸುಲಭವಾಗಿ ಮತ್ತು ಕೈಗೆಟುಕುವಂತೆ ಮಾಡಿದೆ. ತನ್ನ ಗ್ರೂಪ್ ಕಂಪನಿಗಳ ಜೊತೆಯಲ್ಲಿ, ಫ್ಲಿಪ್ ಕಾರ್ಟ್ ತಂತ್ರಜ್ಞಾನದ ಮೂಲಕ ಭಾರತದಲ್ಲಿ ವಾಣಿಜ್ಯ ವಹಿವಾಟನ್ನು ಪರಿವರ್ತಿಸಲು ಬದ್ಧವಾಗಿದೆ.

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು media@flipkart.com ಗೆ ಬರೆಯಿರಿ